ಪರಿಸ್ಥಿತಿ ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳಿಗೆ ಹಣ ಬಿಡುಗಡೆ ಮಾಡಲಾಗುತ್ತದೆ.

ಆ) ಯೋಜನೆಗಳಿಗೆ ಬಿಡುಗಡೆ ಮಾಡಲಾದ ಹಣ ಭರವಸೆ ಪತ್ರಕ್ಕೆ ಅನುಗುಣವಾಗಿ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಲಾದ ಹಣ ಈ ರೀತಿ ಇದೆ.

(ಲಕ್ಷ ರೂ.ಗಳಲ್ಲಿ)

ಸಂಖ್ಯೆ	ಯೋಜನೆ	1988-89	1989-90	1990-91 (ಜನವರಿ ಕೊನೆಯವರೆಗೆ
1.	ಮಲಪ್ರಭ	1529.55	1813.99	1248.39
2.	ಘಟಪ್ರಭಾ	1028.79	1251.13	1111.36
3.	ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟ	5012.00	5728.00	5166.00

ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿನ ಕೆಳಗೆ 714 ಮಿಲಿಯನ್ ಯುನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕಾರ್ಯಕ್ರಮ ಇದೆ. ಈ ದಿಕ್ಕಿನಲ್ಲಿ ಪೆನ್ ಸ್ಟಾಕ್ ಪೈಪುಗಳನ್ನು ಈಗಾಗಲೇ ಅಳವಡಿಸಲಾಗಿದ್ದು ಪವರ್ ಹೌಸ್ ಕಾಮಗಾರಿ ಆಗಬೇಕಾಗಿದೆ. ಆಲಮಟ್ಟಿ ಅಣೆಕಟ್ಟನ್ನು ಏರಿಸಲು ಗುತ್ತಿಗೆದಾರರನ್ನು ಶೀಘ್ರದಲ್ಲೇ ನಿಗದಿಪಡಿಸಲಾಗಲಿದ್ದು ಅಣೆಕಟ್ಟಿನಲ್ಲಿ ನೀರು ಸಂಗ್ರಹಣೆ ಆದ ನಂತರ ವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭಿಸಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಬೆಳೆ ಉತ್ಪಾದನಾ ಸಾಮರ್ಥ್ಯದ ಬಗ್ಗೆ

212 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಜನ ಕಬ್ಬು ಬೆಳೆಯಲಾಗುತ್ತಿದೆ?

ಆ) ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಎಷ್ಟು ಟನ್ ಕಬ್ಬನ್ನು ವರ್ಷಕ್ಕೆ ನುರಿಸುವ ಸಾಮರ್ಥ್ಯ ಹೊಂದಿದೆ?

ಇ) ಕಾರ್ಖಾನೆಗಳು ನುರಿಸಿ ಎಷ್ಟು ಟನ್ ಕಬ್ಬು ಉಳಿಯುತ್ತದೆ?

ಈ) ಈ ಹೆಚ್ಚುವರಿ ಉಳಿದ ಕಬ್ಬನ್ನು ನುರಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) 1989-90 ರ ಅಂಕಿ ಅಂಶಗಳ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 50 ಲಕ್ಷ ಮೆಟ್ರಿಕ್ ಟನ್ ಕಬ್ಬು ಉತ್ಪಾದನೆಯಾಗಿದೆ. ಎಂದು ಅಂದಾಜು ಮಾಡಲಾಗಿದೆ.

ಆ) ಜಿಲ್ಲೆಯಲ್ಲಿರುವ 7 ಸಕ್ಕರೆ ಕಾರ್ಖಾನೆಗಳು ವರ್ಷಕ್ಕೆ ಸುಮಾರು 25 ಲಕ್ಷ ಟನ್‌ಗೂ ಮೀರಿ ಕಬ್ಬನ್ನು ನುರಿಸುವ ಸಾಮರ್ಥ್ಯ ಹೊಂದಿರುತ್ತದೆ.

ಇ) ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಕಾರ್ಯಕ್ಷೇತ್ರದಲ್ಲಿ ಸುಮಾರು 16ರಿಂದ 18 ಲಕ್ಷ ಮೆಟ್ರಿಕ್ ಟನ್ ಕಬ್ಬು ಉಳಿಯಬಹುದೆಂದು ಅಂದಾಜು ಮಾಡಲಾಗಿದೆ.

ಈ) ಭಾರತ ಸರ್ಕಾರ ಜಿಲ್ಲೆಯಲ್ಲಿ 2500 ಮೆಟ್ರಿಕ್ ಟನ್ ಸಾಮರ್ಥ್ಯದ ಎರಡು ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಪತ್ರ ನೀಡಿರುವುದರಿಂದ ಹಾಗೂ ಸದರಿ ಕಾರ್ಖಾನೆಗಳು ಕಾರ್ಯಾರಂಭ ಮಾಡುವುದರಿಂದ ಮತ್ತು ಜಿಲ್ಲೆಯ ಸಹಕಾರ ಸಕ್ಕರೆ ಕಾರ್ಖಾನೆಗಳು ತಮ್ಮ ಕಬ್ಬು ಅರೆಯುವಿಕೆ ಸಾಮಾರ್ಥ್ಯವನ್ನು ವಿಸ್ತರಣೆ ಮಾಡುವ ಯೋಜನೆ ಹಾಕಿಕೊಂಡಿರುವುದರಿಂದ ಜಿಲ್ಲೆಯಲ್ಲಿ ಉಳಿಯುವ ಹೆಚ್ಚುವರಿ ಕಬ್ಬಿನ ಪೂರ್ಣ ಉಪಯೋಗವಾಗಲಿದೆ.